**ವಾರ್ತಾ ವಿಶ್ಲೇಷಣೆ**

## ನಿಮ್ಮ ಮಕ್ಕಳನ್ನು ಕೇಳಿ ನೋಡಿ

ನೀವು ಟಿ.ವಿ., ರೆಫ್ರಿಜರೇಟರ್, ಟೂತ್‌ಪೇಸ್ಟ್, ಸಾಬೂನು, ಗಾಡಿ ಏನೇ ಪದಾರ್ಥವನ್ನಾಗಲಿ ತಿಂಡಿ, ಪಾನೀಯವನ್ನಾಗಲಿ ಖರೀದಿಸಲು ಹೊರಟಿದ್ದರೆ, ಸ್ವಲ್ಪ ತಾಳಿ. ಮೊದಲು ನಿಮ್ಮ ಮಕ್ಕಳನ್ನು ಕೇಳಿ. ಅವರನ್ನೂ ಜೊತೆಯಲ್ಲಿ ಕರೆದೊಯ್ಯುವುದು ಇನ್ನೂ ಉತ್ತಮ! ನಿಮಗಿಂತ ಅವರಿಗೇ ಹೆಚ್ಚು ತಿಳಿದಿರುವ ಸಾಧ್ಯತೆಯಿದೆ. ಜಾಹಿರಾತುಗಳಲ್ಲಿ ಮಕ್ಕಳನ್ನು ಹೆಚ್ಚು ತೋರಿಸುವುದು ಹಾಗೂ ಅವರು ಪ್ರದರ್ಶಿಸುತ್ತಿರುವ ವಸ್ತುಗಳ ಬಳಕೆಯನ್ನು ವಿವರಿಸುವುದು—ಇವೆಲ್ಲ ಇತ್ತೀಚಿನ ಬೆಳವಣಿಗೆಗಳು. ಇದರ ಹಿನ್ನೆಲೆಯಲ್ಲಿ ಬಹಳಷ್ಟು ಬಂಡವಾಳವಿದೆಯೆಂಬುದು ನಿಮಗೆ ತಿಳಿದಿದೆಯೇ?

ನಮ್ಮ ದೇಶದ ಮಕ್ಕಳು ೨೯೧ ಕೋಟಿ ರೂಪಾಯಿಗಳಷ್ಟು ಹಣವನ್ನು ಪ್ರತಿ ವರ್ಷವೂ ವಸ್ತುಗಳನ್ನು ಕೊಂಡುಕೊಳ್ಳುವಲ್ಲಿ, ತಿನ್ನುವಲ್ಲಿ ಖರ್ಚುಮಾಡುತ್ತಿರುವರು ಎಂದರೆ ನಂಬುವಿರಾ? ಇತ್ತೀಚೆಗೆ ದೆಹಲಿ, ಮುಂಬೈ, ಬೆಂಗಳೂರು, ಕೊಲ್ಕತಾ, ಚೆನ್ನೈ, ಹೈದರಾಬಾದ್, ಜೈಪುರ, ಲುಧಿಯಾನಾ, ನಾಸಿಕ್, ಅಹಮದಾಬಾದ್, ಲಕ್ನೋ, ಕೊಚಿನ್, ಮದುರೈ ಹಾಗೂ ಗುವಾಹಟಿ ನಗರಗಳಲ್ಲಿ ಒಂದು ಸಮೀಕ್ಷೆಯನ್ನು ಮಾಡಲಾಗಿದ್ದು ಅದರಲ್ಲಿ ೮,೯೨೭ ಜನ ಭಾಗವಹಿಸಿದ್ದರು. ಇದರಲ್ಲಿ ೬,೦೪೩ ಮಕ್ಕಳು ಹಾಗೂ ತಂದೆತಾಯಿಯರಿದ್ದರು. ಟರ್ನರ್ ಇಂಟರ್ ನ್ಯಾಷನಲ್ ಏಷಿಯಾ ಪೆಸಿಫಿಕ್ ಸಂಸ್ಥೆಯು ಈ ಸಮೀಕ್ಷೆಯನ್ನು ೨೦೦೫ರ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಕೈಗೊಂಡಿತ್ತು.

ಮಕ್ಕಳ ದೈನಂದಿನ ಜೀವನವನ್ನು ರೂಪಿಸುವ ಕೈವೆಚ್ಚದ ಹಣ (pocket money), ದೃಶ್ಯಮಾಧ್ಯಮಗಳು, ಮೌಲ್ಯಗಳು ಮನೋಭಾವಗಳು ಹಾಗೂ ಹವ್ಯಾಸಗಳನ್ನು ಅಧ್ಯಯನ ಮಾಡುವುದೇ ಈ ಸಮೀಕ್ಷೆಯ ಉದ್ದೇಶವಾಗಿತ್ತು. ೧೫–೧೯ರ ವಯಸ್ಸಿನವರನ್ನೂ ಇದರಲ್ಲಿ ಸೇರಿಸಲಾಗಿತ್ತು. ಸಮೀಕ್ಷೆಯನ್ನು ಕೈಗೊಂಡ ಮಿ.ಡಂಕನ್ ಮಾರಿಸ್ ಹೇಳುತ್ತಾರೆ: "ಶೇಕಡಾ ೪೦ರಷ್ಟು ಮಕ್ಕಳು ಕಂಪ್ಯೂಟರ್ ಬಳಸುತ್ತಾರೆ. ಮೊಬೈಲ್ ಫೋನ್, ವಿ.ಸಿ.ಡಿ./ ಡಿ.ವಿ.ಡಿ. ಪ್ಲೇಯರ್‌ಗಳು ಶೇಕಡಾ ೫೦ರಷ್ಟು ಮನೆಗಳಲ್ಲಿವೆ. ಶೇಕಡಾ ೭೦ರಷ್ಟು ಮಕ್ಕಳು ಕ್ಯಾಮರಾವುಳ್ಳ ಮೊಬೈಲ್ ಫೋನ್ ಬೇಕು ಎಂದು ತಿಳಿಸಿದ್ದಾರೆ!"

ಸಮೀಕ್ಷೆಯಲ್ಲಿ ಭಾಗವಹಿಸಿದ ತಂದೆ ತಾಯಂದಿರಲ್ಲಿ ಶೇಕಡಾ ೭೪ರಷ್ಟು ಜನ ಮಕ್ಕಳೊಂದಿಗೆ ಮಾರುಕಟ್ಟೆಗೆ ಹೋಗುತ್ತಾರಂತೆ. ಯಾವ ಬ್ರ್ಯಾಂಡ್ ಕೊಳ್ಳಬೇಕು, ಯಾವುದರಲ್ಲಿ ಹೆಚ್ಚು ಸೌಲಭ್ಯಗಳಿವೆ ಇತ್ಯಾದಿ ಮಾಹಿತಿಯನ್ನು ಮಕ್ಕಳೇ ನೀಡುತ್ತಾರೆ. ಪ್ರತಿನಿತ್ಯ ಪಾಕೆಟ್ ಮನಿ ಪಡೆಯುತ್ತಿರುವ ಮಕ್ಕಳ ಸಂಖ್ಯೆ ಶೇಕಡಾ ೫೪. ಕೊಡುಗೆ ಹಣವೂ ಸೇರಿ ಮಕ್ಕಳ ಕೈಯಲ್ಲಿ ಸೇರುವ ಹಣ ೩೬೪ ಕೋಟಿ ರೂಪಾಯಿಗಳು! ಇದರಲ್ಲಿ ಶೇಕಡಾ ೮೦ರಷ್ಟು ಮಾತ್ರ ಖರ್ಚಾಗುತ್ತದೆ ಎಂದು ಅಂದಾಜು ಮಾಡಿದರೂ ಅದು ೨೯೧ ಕೋಟಿ ರೂಪಾಯಿಗಳ ಬೃಹತ್ ಮೊತ್ತವಾಗುತ್ತದೆ!

ಇದೆಲ್ಲ ನಗರ ಪ್ರದೇಶಗಳ ಶ್ರೀಮಂತ ಮಕ್ಕಳ ದುಂದುವೆಚ್ಚ ಎಂಬುದಂತೂ ಸತ್ಯ. ದಿನದ ಒಂದು ಹೊತ್ತಿನ ಊಟಕ್ಕೂ ಗತಿಯಿಲ್ಲದ ಲಕ್ಷಾಂತರ ಮಕ್ಕಳು ಗ್ರಾಮಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ, ನಗರದ ಕೊಳೆಗೇರಿಗಳಲ್ಲಿ ವಾಸಿಸುತ್ತಿದ್ದಾರೆ. ಅವರಿಗೆ ಪಾಕೆಟ್ ಮನಿಯ ಅರ್ಥವೇ ಗೊತ್ತಿಲ್ಲ. ಅವರತ್ತ ಈ ಮಕ್ಕಳು ಸ್ವಲ್ಪವಾದರೂ ಗಮನ ಹರಿಸಿದರೆ ಕಷ್ಟವೇನೆಂಬುದು ಇವರಿಗೂ ತಿಳಿದೀತು. ದುರಭ್ಯಾಸಗಳನ್ನು, ದುಂದುವೆಚ್ಚವನ್ನು ತಡೆಗಟ್ಟುವಲ್ಲಿಯೂ ಇದು ಸಹಕಾರಿಯಾಗುವುದು. ✪

## ಯಾರು ಉತ್ತಮ?

ಗುಜರಾತಿನ ಬಾಬರ್ ತೀರ್ಥವೆಂಬ ಸ್ಥಳದಲ್ಲಿರುವ ಜೈನ ಸಂಪ್ರದಾಯದ ದೇರಾಸರ್ ಮಂದಿರದಲ್ಲಿ ೨೦೦೬ರ ಫೆಬ್ರವರಿ ೧೯ರಂದು ಅಪೂರ್ವ ಘಟನೆಯೊಂದು ನಡೆಯಿತು. ಅತ್ಯಂತ ಪ್ರಸಿದ್ಧನೂ ಶ್ರೀಮಂತನೂ ಆದ ವಜ್ರಗಳ ವ್ಯಾಪಾರಿ ರಸಿಕ್‌ಲಾಲ್ ಗಢೇಭಾ (೪೫) ತನ್ನ ಪತ್ನಿ ಜ್ಯೋತ್ಸ್ನಾ (೪೩) ಹಾಗೂ ಪುತ್ರಿ ಶೀತಲ್‌ಳೊಂದಿಗೆ ಜೈನಸಂಪ್ರದಾಯದಂತೆ ಸಂನ್ಯಾಸ ಸ್ವೀಕರಿಸಿ, ಮುಂಬೈನ ಪ್ರಸಿದ್ಧ ವಜ್ರಗಳ ಅಂಗಡಿ ಹಾಗೂ ಬೆಲ್ಜಿಯಂನಲ್ಲಿದ್ದ ವಹಿವಾಟು ಸೇರಿದಂತೆ ತನ್ನ ಎಲ್ಲ ಆಸ್ತಿಯನ್ನೂ ಸಂಬಂಧಿಕರಿಗೆ ಹಾಗೂ ಸೇವಾಸಂಸ್ಥೆಗಳಿಗೆ ದಾನ ಮಾಡಿಬಿಟ್ಟಿದ್ದಾನೆ.

ಇದಕ್ಕೆಲ್ಲ ಕಾರಣ ಎರಡು ವರ್ಷಗಳ ಹಿಂದೆ ಅವನ ಹಿರಿಯ ಮಗ ತೀರಿಕೊಂಡದ್ದು. ಈ ದುಃಖದ ಘಟನೆಯು ಆ ಮನೆಯವರನ್ನು ಜೀವನದ ಬಗ್ಗೆ ಮತ್ತೆ ಆಲೋಚಿಸುವಂತೆ ಮಾಡಿತು. ಎರಡನೆಯ ಮಗ ಚಿರಾಗ್ ಮನೆಯನ್ನು ತ್ಯಜಿಸಿಯೇ ಬಿಟ್ಟ. ಅವನ ವೈರಾಗ್ಯದ ಬಿಸಿ ಈಗ ತಂದೆಗೂ ಮುಟ್ಟಿದೆ. ಅವನಿಂದ ಪ್ರೇರಣೆಯನ್ನು ಪಡೆದು ಮನೆಯವರೆಲ್ಲ ಶ್ವೇತಾಂಬರ ಜೈನ ಪದ್ಧತಿಯ ಪ್ರಕಾರ ಸಂನ್ಯಾಸಿಗಳಾಗಿದ್ದಾರೆ.

ಈ ಬಗೆಯ ಸರ್ವಸಂಗಪರಿತ್ಯಾಗಕ್ಕೂ ಮುಂದೆ ಹೇಳುವ ಸ್ವಾರ್ಥದ ಪರಮಾವಧಿಗೂ ಇರುವ ಅಂತರವನ್ನು ಗಮನಿಸಿ. ನಂತರ, ಇವರಲ್ಲಿ ಯಾರು ಉತ್ತಮ ಎನ್ನುವುದನ್ನು ನೀವೇ ನಿರ್ಧರಿಸಿ.

ಅಮೆರಿಕದ ಧನಿಕರಲ್ಲೊಬ್ಬನಾದ ಡೇವಿಡ್ ಪಿಜರ್ (೬೪) ತನ್ನ ೧೦ ಮಿಲಿಯನ್ ಡಾಲರ್ ಸಂಪತ್ತನ್ನು ಕಾನೂನಿನ ವ್ಯವಸ್ಥೆಯ ಮೂಲಕ ಜೋಪಾನವಾಗಿಡಲು ಟ್ರಸ್ಟ್ ಪ್ರಾರಂಭಿಸಿದ್ದಾನೆ. ಇಂತಹ ಅನೇಕ ಟ್ರಸ್ಟ್‌ಗಳು ಈಗಾಗಲೇ ಅಮೆರಿಕದಲ್ಲಿವೆ. ಈ ಟ್ರಸ್ಟ್‌ಗಳು ಏಕೆ ಪ್ರಾರಂಭಗೊಳ್ಳುತ್ತಿವೆ ಎಂಬುದಕ್ಕೆ ಉತ್ತರವನ್ನು ಪಿಜರ್‌ನ ಬಾಯಿಂದಲೇ ಕೇಳೋಣ: 'ನಾನು ಸತ್ತ ನಂತರ ನನ್ನ ಶರೀರವನ್ನು ನೈಟ್ರೋಜನ್ ದ್ರವದಲ್ಲಿ ಶೀತಲೀಕರಿಸಲಾಗುತ್ತದೆ. ವೈದ್ಯಕೀಯ ಪ್ರಗತಿಯ ಫಲವಾಗಿ ಇನ್ನು ಕೆಲವು ದಶಕಗಳ ನಂತರ ಹಾಗೆ ಸಂರಕ್ಷಿಸಲ್ಪಟ್ಟ ಶರೀರಕ್ಕೆ ಮತ್ತೆ ಜೀವ ತುಂಬಲು ಸಾಧ್ಯವಾಗುತ್ತದೆ ಎಂದು ನಾನು ನಂಬುತ್ತೇನೆ. ನಾನು ಮತ್ತೆ ಜೀವಂತವಾಗಿ ಬಂದಾಗ ಬಡವನಾಗಿದ್ದು ಕಷ್ಟ ಪಡಬಯಸುವುದಿಲ್ಲ. ಆದ್ದರಿಂದ ನನ್ನ ಸಂಪತ್ತನ್ನು ನನ್ನ ಹೆಸರಿನಲ್ಲೇ ಇರಿಸುತ್ತಿದ್ದೇನೆ." ಸುಮಾರು ೧೨ ಅಮೆರಿಕನ್ ಹಣವಂತರು ಇಂತಹ ವೈಯಕ್ತಿಕ ಪುನರುಜ್ಜೀವನ ಟ್ರಸ್ಟ್‌ಗಳನ್ನು (Personal Revival Trust) ಪ್ರಾರಂಭಿಸಿ, ಅದಕ್ಕಾಗಿ ಹೊಸ ಕಾನೂನು ಹಾಗೂ ಆರ್ಥಿಕ ನಿಯಮಗಳನ್ನು ಹುಟ್ಟುಹಾಕಿದ್ದಾರೆ. ಈಗಾಗಲೇ ಅಮೆರಿಕದ ೨೦ ರಾಜ್ಯಗಳು ಇಂತಹ ಟ್ರಸ್ಟ್‌ಗಳಿಗೆ ಅನುಮತಿ ನೀಡಿವೆ. ೧೯೮೯ರಲ್ಲಿ ಪ್ರಾರಂಭವಾದ ಕ್ರಯೋನಿಕ್ಸ್ ಟ್ರಸ್ಟ್ (ಕ್ರಯೋಜನ್ ಎಂಬ ಮಿಶ್ರಣದ ಸಹಾಯದಿಂದ ದ್ರವ, ವಸ್ತುಗಳನ್ನು ಘನೀಕರಿಸುವ ಪದ್ಧತಿ) ಕೇವಲ ೨೩,೦೦೦ ಡಾಲರ್‌ಗಳನ್ನು ನೀಡುವವರಿಗೆ ಸದಸ್ಯತ್ವವನ್ನು ನೀಡುತ್ತದೆ. ಈಗಾಗಲೇ ೧೪೨ ಮಾನವ ಶರೀರಗಳು ಹಾಗೆ ಶೀತಲೀಕರಿಸಲ್ಪಟ್ಟಿವೆ.

ಮಡದಿ ಮಕ್ಕಳಿಗೂ ತಮ್ಮ ಸಂಪತ್ತನ್ನು ನೀಡದೆ, ತಮ್ಮ ಹೆಸರಿನಲ್ಲೇ ಇರಿಸಿಕೊಂಡು ಮುಂದೆ ಮತ್ತೆ ಅದನ್ನು ಅನುಭವಿಸಬೇಕೆಂಬ ದುರಾಸೆಯ ಸ್ವಾರ್ಥಿಗಳು ಇವರು ಎನ್ನುವಿರೋ ಅಥವಾ ಎಂದೋ ಆಗಬಹುದಾದ ವಿಜ್ಞಾನದ ಅದ್ಭುತವನ್ನು ನಂಬಿರುವ ಮೂಢರು ಎನ್ನುವಿರೋ! ಅಥವಾ ಪ್ರಾಚೀನ ಈಜಿಪ್ಟಿನ ಫೆರೋಗಳ ಸ್ವಾರ್ಥ ಮತ್ತೆ ಪುನರುಜ್ಜೀವನ ಹೊಂದುತ್ತಿದೆ ಎನ್ನುವಿರೋ? ✪